ಕಥೆಗಾರ ಹಾಗೂ ಕಾದಂಬರಿಕಾರ ಮಲ್ಲಿಕಾರ್ಜುನ ಹಿರೇಮಠ ಅವರು ಕೊಪ್ಪಳದ ಬಿಸರಹಳ್ಳಿಯವರು. 'ಅಮೀನಪುರದ ಸಂತೆ' ಹಾಗೂ 'ಮೊಲೆವಾಲು ನಂಜಾಗಿ' ಪ್ರಸಿದ್ಧ ಕಥಾ ಸಂಕಲನಗಳು. 'ಹವನ', 'ಹಾವಳಿ' ಕಾದಂಬರಿಗಳು. 'ಜ್ಞಾನೇಶ್ವರನ ನಾಡಿನಲ್ಲಿ' (ಪ್ರವಾಸ ಕಥನ), 'ಅಂತರ್ಗತ' (ವಿಮರ್ಶೆ), 'ಅಭಿಮುಖ' (ವಿಮರ್ಶೆ), 'ಮೂರುಸಂಜೆ ಮುಂದ ಧಾರವಾಡ' (ಲಲಿತ ಪ್ರಬಂಧಗಳು), 'ಗಿರಡ್ಡಿ ಗೋವಿಂದರಾಜ: ವ್ಯಕ್ತಿ ಅಭಿವ್ಯಕ್ತಿ' (ವಿಮರ್ಶೆ)' ಅವರ ಪ್ರಮುಖ ಕೃತಿಗಳು.

'ಅವ ನನ್ನ ಭೈಯ್ಯಾ, ನೀವೇನೂ ಚಿಂತಿ ಮಾಡಬ್ಯಾಡ್ರಿ. ನಾನಿದ್ದೀನಿ.'

ಮರುದಿನ ಆಸ್ಪತ್ರೆಗೆ ಹೋದ. ಅವನನ್ನ ಕೊರೊನಾ ತೀವ್ರ ಘಟಕದಲ್ಲಿಟ್ಟಿದ್ದರು. ಡಾಕ್ಟರನ್ನು ಬಹಳಷ್ಟು ಕೇಳಿಕೊಂಡ ಬಳಿಕ ಕೈಗೆ ಸ್ಯಾನಿಟೈಸರ್ ಹಾಕಿಸಿಕೊಂಡು, ಮಾಸ್ಕ್ ಹಾಕ್ಕೊಂಡು, ಅವರು ಕೊಟ್ಟ ಗೌನು ತೊಟ್ಕೊಂಡು ಒಳ ಹೋದ. ಸಲೀಮನ ಮೂಗಿಗೆ ವೆಂಟಿಲೇಟರ್ ಹಾಕಿದ್ದರು. ಅವನು ಗಣೇಶನತ್ತ ನೋಡಿದ. ಅವನ ಕಣ್ತುಂಬಿದ್ದವು ಅನಿಸಿತು. ಕೈ ಎತ್ತಲು ಪ್ರಯತ್ನಿಸಿದ. 'ಧೈರ್ಯವಾಗಿರು' ಅಂತ ಹೇಳಿ ಹೊರಬಂದು ಸುರೇಶ ಡಾಕ್ಟರರನ್ನ ಕಂಡು ಮಾತಾಡಿದ. 'ಉಸಿರಾಟದ ಸಮಸ್ಯೆ ಆಗೇದ. ಎಲ್ಲಾ ಪ್ರಯತ್ನ ಮಾಡ್ತೀವಿ' ಅಂದರು. ಮರುದಿನ ಕಂಡೀಶನ್ ಇನ್ನೂ ಕೆಟ್ಟಿತು.

ಬೆಳಿಗ್ಗೆ ಆಸ್ಪತ್ರೆಯಿಂದ ಸಲೀಮ ತೀರಿಕೊಂಡ ಸುದ್ದಿ ಬಂತು. ಸಲೀಮನಿಗೆ ಏನೂ ಆಗಬಾರದು ದೇವರೇ ಅಂದುಕೊಂಡದ್ದು ಆಗೇಬಿಟ್ಟಿತು. ಧೈರ್ಯಾ ತಗೊಂಡು ಅವನ ಮನಿಗೆ ಹೋಗಿ ಸುತ್ತೂ ಬಳಸಿ ತಂದಿತಾಯಿಗೆ ಸಲೀಮನ ಸಾವಿನ ಸುದ್ದಿ ತಿಳಿಸಿದ. ಇಡೀ ಮನಿ ಬೆಚ್ಚಿಬಿದ್ದು ಒಂದೇ ಸವನೆ ರೋದಿಸತೊಡಗಿತು. ಅತ್ತೂ ಕರೆದು ಆದ ಮ್ಯಾಲೆ ಅವರು, 'ಮಗನ ಮುಖಾ ನೋಡಬೇಕು, ಸಂಸ್ಕಾರ ಮಾಡಬೇಕು' ಅಂದರು. 'ಇಬ್ಬರೂ ವಯಸ್ಸಾದವರು, ಈ ಕಾಲದಾಗ ನೀವು ಬರೋದು ಸರಿಯಲ್ಲ, ನೀವಿದ್ದಲ್ಲೇ ನಿಮ್ಮ ಮಗನ ಮುಖಾ ನೋಡುವ ಹಾಂಗ ಮಾಡ್ತೀವಿ' ಅಂತ ಭರೋಸಾ ಕೊಟ್ಟು ಬಿಟ್ಟ.

ಈ ಹಿಂದೆ ಆತ ಟಿ.ವಿ.ಯಲ್ಲಿ ನೋಡಿದ್ದ, ಹೆಣಗಳನ್ನ ಚೀಲಗಳಲ್ಲಿ ತುರುಕಿ ಕಂದಕದಲ್ಲಿ ಬಿಸಾಕುವುದನ್ನ... ತನ್ನ ಸಲೀಮನನ್ನ ಹೀಗೇ ಸಗಟಾಗಿ ಕಂದಕದಲ್ಲಿ ಒಗೆಯಲು ಬಿಡೋದs? ಈಗ ಸಂಬಂಧಿಕರೂ ಹತ್ತರ ಸುಳಿವಂತಿಲ್ಲ. ಕರುಳು ಚುರಕ್ ಅಂತು. ಛೇ ಅನಿಸಿ ಅವನು ಯೋಚಿಸಿದ. ಡಾಕ್ಟರ ಸುರೇಶರನ್ನು ಕಂಡು ಮಾತಾಡಿದ. ಸಮಾನಮನಸ್ಕ ಗೆಳೆಯರನ್ನ ಸಂಪರ್ಕಿಸಿದ. ಅವರೆಲ್ಲರೂ ತಾವು ಕೈಜೋಡಿಸೋದಾಗಿ ಹೇಳಿದರು. ಆನಂದನ ಬಳಿ ಬುಲ್ಡೋಜರ್ ಇದ್ದರೆ, ಸೋಮುನ ಬಳಿ ಒಂದು ಕ್ರೂಜರ್ ವಾಹನ ಇತ್ತು. ತಿಮ್ಮ-ಹನುಮಂತ ದಾಂಡಿಗರು. ಒಟ್ಟು ಐದು ಜನ ಸೇರಿ ಒಂದು ತಂಡ ಕಟ್ಟಿಕೊಂಡು ತಾವು ಕೊರೊನಾ ಸೈನಿಕರಾಗಿ ಸಂಸ್ಕಾರ ಮಾಡೋದಾಗಿ ಡಾಕ್ಟರ್ ಸುರೇಶರಿಗೆ ಕೇಳಿಕೊಂಡರು. ಕೇವಲ ಆಸ್ಪತ್ರೆಯ ಸಿಬ್ಬಂದಿಗೇ ಎಲ್ಲಾ ನಿರ್ವಹಿಸೋದೂ ಕಷ್ಟವಾಗಿತ್ತು. ಡಾಕ್ಟರು ಒಪ್ಪಿಕೊಂಡು ಕೆಲವು ಸೂಚನೆಗಳನ್ನು ನೀಡಿ ಪ್ರತಿಯೊಬ್ಬರಿಗೂ ಪಿ.ಪಿ.ಇ. ಕಿಟ್ಟುಗಳನ್ನ ಕೊಡತಾ ಹೇಳಿದರು: 'ಈ ವಿಷಾಣು ವಿರುದ್ಧ ಹೋರಾಡೋದು, ಮನುಷ್ಯ ಸ್ವಾಸ್ಥ್ಯ ಕಾಪಾಡೋದು ಅಗತ್ಯ. ನಾವು ಯಾವತ್ತೂ ರೋಗದ ಪರ ಅಲ್ಲ, ರೋಗಿಯ ಪರ ಕೆಲಸ ಮಾಡಬೇಕಿದೆ. ಕೊಲ್ಲುವ ಶಕ್ತಿಯ ವಿರುದ್ಧ ಉಳಿಸುವ ಶಕ್ತಿಯನ್ನ ನಾವು ಬೆಳೆಸಿಕೋಬೇಕಿದೆ... ಮಾತಿನ ಮರುಕ ಕ್ರಿಯೆಯಾಗುವ ಜರೂರು ಇದೆ. ನೀವು ಸ್ವಯಂಸ್ಫೂರ್ತಿಯಿಂದ ಬಂದದ್ದು ಬಹಳ ಸಂತೋಷ.' ತಾನು ಬದುಕಿನಲ್ಲಿ ಪಟ್ಟ ಅನುಭವಗಳ ಬೆಳಕಿನಲ್ಲಿ ಇಂಥದೇ ಮನೋಭಾವ ತಳೆದಿದ್ದ ಗಣೇಶನಿಗೆ ಡಾಕ್ಟರ್ ಮಾತುಗಳು ಬಹಳ ಪಟಾಯಿಸಿದವು.

ಗಣೇಶನ ತಂಡದವರು ಸೇವಾಭಾವದಿಂದ ಕಾರ್ಯತತ್ಪರರಾದರು. ಅದೇ ದಿನ ಇನ್ನೂ ನಾಕು ಹೆಣಗಳನ್ನ ದಫನ ಮಾಡಬೇಕಾಗಿತ್ತು. ವಿಧಿವತ್ತಾಗಿ ಸಂಸ್ಕಾರ ಮಾಡತಾ ಆಯಾ ಕುಟುಂಬದವರಿಗೆ ವಿಡಿಯೋ ಮೂಲಕ ತೋರಿಸಿದರು. ಇಂಥ ಹತಾಶ